# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2419 (2855) |
| 2 | ಸದಸ್ಯರ ಹೆಸರು | : | **ಶ್ರೀ ಹೆಚ್. ಎಂ. ರಮೇಶ್ ಗೌಡ.**<br>(ವಿಧಾನ ಸಭೆ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : | 30-03-2022 |
| 4 | ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಮತ್ತು ಅನುಷ್ಠಾನಗೊಳಿಸಲು ಬಾಕಿ ಇರುವ ವಿವಿಧ ಯೋಜನೆಗಳಾವುವು? (ಜಿಲ್ಲಾವಾರು ವಿವರ ನೀಡುವುದು) | **ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ)**<br><br>ಎನ್.ಕೆ.ಯು.ಎಸ್.ಐ.ಪಿ ಕಳೆದ ಎರಡು ವರ್ಷಗಳಿಂದ ಯಾವುದೇ ಹೊಸ ಕಾಮಗಾರಿ ಅನುಮೋದನೆಗೊಂಡಿರುವುದಿಲ್ಲ. ಆದರೆ, ಹಿಂದಿನ ಸಾಲಿನಿಂದ ಮುಂದುವರೆದ ಕಾಮಗಾರಿ ಚಾಲ್ತಿಯಲ್ಲಿದ್ದು, ಸದರಿ ಪಟ್ಟಿಯನ್ನು **ಅನುಬಂಧ**-1 ರಲ್ಲಿ ಲಗತ್ತಿಸಿದೆ.<br><br>ಎನ್‌ಕೆಯುಎಸ್‌ಐಪಿ ಯೋಜನೆಯಡಿ 2008 ರಿಂದ 24 ನಗರ/ಪಟ್ಟಣಗಳ ಮೂಲ ಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳಾದ ನೀರು ಸರಬರಾಜು, ಒಳಚರಂಡಿ, ಮಳೆನೀರಿನ ಚರಂಡಿಗಳು, ರಸ್ತೆ ಅಭಿವೃದ್ಧಿ, ಕೊಳಚೆ ಪ್ರದೇಶ ಅಭಿವೃದ್ಧಿ, ಅಗ್ನಿಶಾಮಕ ಸೇವೆ, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಕೆರೆ ಅಭಿವೃದ್ಧಿಯಂತಹ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಒಟ್ಟು 130 ಪ್ಯಾಕೇಜುಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಿಡಿ 119 ಗುತ್ತಿಗೆಗಳು ಪೂರ್ಣಗೊಂಡಿದೆ. ಉಳಿದ 9 ಗುತ್ತಿಗೆಗಳು ಅನುಷ್ಠಾನದ ವಿವಧ ಹಂತದಲ್ಲಿದೆ. 2 ಕಾಮಗಾರಿಗಳ ಗುತ್ತಿಗೆದಾರರು ಕರಾರಿನ ನಿಯಮಾವಳಿಯಂತೆ ಕಾಮಗಾರಿಯನ್ನು ನಿರ್ವಹಿಸದ ಕಾರಣ, ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.<br><br>ಎಡಿಬಿ ನೆರವು ಡಿಸೆಂಬರ್ 2016 ರಲ್ಲಿ ಮುಕ್ತಾಯವಾದುದರಿಂದ, ಅಧಿಕಾರಯುತ ಸಮಿತಿಯ ನಿರ್ಧಾರದಂತೆ ರದ್ದುಪಡಿಸಿದ ಎರಡು ಪ್ಯಾಕೇಜುಗಳನ್ನು ಕೈಬಿಡಲಾಗಿದೆ.<br><br>**ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್)**<br><br>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್) ರಾಜ್ಯದ ಆಯ್ದ 8 ಪಟ್ಟಣ/ನಗರಗಳಲ್ಲಿ ಒಳಚರಂಡಿ/ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|

ಕ್ವಿಮಿಪ್ ಕಾರ್ಯಕ್ರಮವನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್-1 ರಲ್ಲಿ 4 ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ಒಳಗೊಂಡಿರುತ್ತದೆ.

ಟ್ರಾಂಚ್-2 ರಲ್ಲಿ 4 ನಗರ ಸ್ಥಳೀಯ ಸಂಸ್ಥೆಗಳಾದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ಒಳಗೊಂಡಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಕ್ವಿಮಿಪ್ ಕಾರ್ಯಕ್ರಮದಡಿಯಲ್ಲಿ ಅನುಷ್ಠಾನಗೊಳಿಸಿರುವ ಮತ್ತು ಅನುಷ್ಠಾನಗೊಳಿಸಲು ಬಾಕಿ ಇರುವ ಕಾಮಗಾರಿಗಳ ಜಿಲ್ಲಾವಾರು ವಿವರವನ್ನು **ಅನುಬಂಧ**-2 ರಲ್ಲಿ ಲಗತ್ತಿಸಿದೆ.

## ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ)

ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ)ಯಡಿ ಮುಂದುವರೆದ ಭಾಗವಾಗಿ ರಾಜ್ಯ ಸರ್ಕಾರದ ಅನುದಾನದಡಿ ತಿಪಟೂರು ನಗರದ ಹಂತ-2 ರ ಒಳಚರಂಡಿ ಕಾಮಗಾರಿಯನ್ನು (ರೂ.25 ಕೋಟಿ) ಹಾಗೂ ಕೊಳ್ಳೇಗಾಲ ನಗರದಲ್ಲಿ 24/7 ನಿರಂತರ ನೀರು ಸರಬರಾಜು ಯೋಜನೆಯನ್ನು (ರೂ.54 ಕೋಟಿ) ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರವು ದಿನಾಂಕ:04-06-2016 ಆದೇಶ ಹೊರಡಿಸಿರುತ್ತದೆ. ಅದರಂತೆ ಕಾಮಗಾರಿಗಳ ಅನುಷ್ಠಾನದ ಪ್ರಗತಿ ವಿವರ ಈ ಕೆಳಕಂಡಂತಿವೆ:

| **ತುಮಕೂರು ಜಿಲ್ಲೆಯ ತಿಪಟೂರು ನಗರಸಭೆ – ಒಳಚರಂಡಿ ಹಂತ-2 ಕಾಮಗಾರಿ** | | | | | |
|---|---|---|---|---|---|
| ರೂ. ಕೋಟಿಗಳಲ್ಲಿ | | ಕಾಮಗಾರಿಯ ವಿವರಗಳು | ಪ್ರಾರಂಭ ಗೊಂಡ ದಿನಾಂಕ | ಪೂರ್ಣ ಗೊಂಡ ದಿನಾಂಕ | ಷರಾ |
| ಗುತ್ತಿಗೆ ಮೊತ್ತ | ಖರ್ಚಾದ ಮೊತ್ತ | | | | |
| 24.15 | 23.61 | • ಒಳಚರಂಡಿ ಜಾಲದ ಉದ್ದ: 90.50 ಕಿ.ಮಿ<br>• ಮ್ಯಾನ್ ಹೋಲ್: 3404 ಸಂಖ್ಯೆ<br>• ಮನೆ ಸಂಪರ್ಕ ಜೋಡಣೆ: 10300<br>• ವೆಟ್‌ವೆಲ್-1 ಸಂಖ್ಯೆ | 13-10-2017 | 31-03-2021 | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| **ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ನಗರಸಭೆ- 24/7 ನಿರಂತರ ನೀರು ಸರಬರಾಜು ಯೋಜನೆ** | | | | | |
| 55.06 | 35.01 | • ನೆಟ್‌ವರ್ಕ್ ಜಾಲ- 205 ಕಿ.ಮಿ<br>• ಗೃಹ ಸಂಪರ್ಕಗಳು- 16000 (ಸಂಖ್ಯೆ)<br>• ಒಹೆಚ್‌ಟಿ-6ನಂ.- 7.50 ಕಿ.ಲಿ | 25-04-2019 | - | ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ: 31.5.2022 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ತದನಂತರ |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | |

| | | | | | |
|---|---|---|---|---|---|
| | | • ಪಂಪ್‌ಹೌಸ್- 1 (ಸಂಖ್ಯೆ)<br>• ಪಂಪಗಳ ಬದಲಿ ಜೋಡಣೆ/ರಿಪೇರ್- 4 (ಸಂಖ್ಯೆ). | | | ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ನಗರಸಭೆ ವತಿಯಿಂದ ನೀರಿನ ಕರ ಸಂಗ್ರಹಣೆ ಮೂಲಕ ಕೈಗೊಳ್ಳುವ ಗುರಿ ಹೊಂದಿದೆ |

## ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (ಕೆಯುಡಬ್ಲ್ಯೂಎಸ್‌ಎಂಪಿ)

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (ಕೆಯುಡಬ್ಲ್ಯೂಎಸ್‌ಎಂಪಿ) ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ- ಕಾರ್ಯಾಚರಣೆ- ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24*7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 279 ಪಿ.ಆರ್.ಜೆ 2018 ಬೆಂಗಳೂರು 22.10.2018 ರಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ- ಕಾರ್ಯಾಚರಣೆ- ವರ್ಗಾವಣೆ (ಡಿಬಿಒಟಿ) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24*7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ॥ ಎಲ್ & ಟಿ ಲಿಮಿಟೆಡ್, ಚೆನ್ನೈ ರವರಿಗೆ ಜೂನ್ 2020 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ.

ಕಾಮಗಾರಿಯ ವಿನ್ಯಾಸ ಮತ್ತು ಅನುಷ್ಠಾನ ಅವಧಿ ಐದು ವರ್ಷವಾಗಿದ್ದು, ನಂತರದ 7 ವರ್ಷಗಳ ಅವಧಿಯ ಕಾರ್ಯಾಚರಣೆ ಹಾಗೂ ನಿರ್ವಹಣೆ (ಒಟ್ಟು 12 ವರ್ಷಗಳು) ಯ ಜವಾಬ್ದಾರಿಯನ್ನು ವಿನ್ಯಾಸ – ನಿರ್ಮಾಣ – ಕಾರ್ಯಾಚರಣೆ – ವರ್ಗಾವಣೆ (DBOT) ಗುತ್ತಿಗೆದಾರರು ನಿರ್ವಹಿಸಬೇಕಿರುತ್ತದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

## 9 ಪಟ್ಟಣಗಳ ನೀರು ಸರಬರಾಜು ಯೋಜನೆ

- ಕರ್ನಾಟಕ ಸರ್ಕಾರವು ಪರಿಷ್ಕೃತ ಸರ್ಕಾರಿ ಆದೇಶ ಸಂಖ್ಯೆ: ನ.ಅ.ಇ 14 ಪಿಆರ್‌ಜೆ 2012, ಬೆಂಗಳೂರು, ದಿನಾಂಕ 15.12.2017 ರಲ್ಲಿ 9 ಪಟ್ಟಣಗಳಿಗೆ ರೂ.205.87 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ನೀಡಿದೆ.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|

- ನೀರು ಸರಬರಾಜು ಉನ್ನತೀಕರಣ ಯೋಜನೆಯ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಶೇ. 50ರಷ್ಟು ಅನುದಾನ ಮತ್ತು ಶೇ. 50ರಷ್ಟು ಮಾರುಕಟ್ಟೆ ಸಾಲದಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- 9 ಪಟ್ಟಣಗಳ ಯೋಜನೆಯಡಿಯಲ್ಲಿ ಹಾಲಿ ಇರುವ ಕುಡಿಯುವ ನೀರಿನ ಯೋಜನೆಯ ಉನ್ನತೀಕರಣ ಕಾಮಗಾರಿಯನ್ನು ಮುಲ್ಕಿ, ಕಂಪ್ಲಿ, ತೆಕ್ಕಲಕೋಟೆ, ಕೊಟ್ಟೂರು, ಮಹಾಲಿಂಗಪುರ, ತೇರೆದಾಳ, ಮುದಗಲ್, ಮುಂಡರಗಿ ಮತ್ತು ಕೆ.ಆರ್ ಪೇಟೆ ಪಟ್ಟಣಗಳಿಗೆ ನಗರ ಸ್ಥಳೀಯ ಸಂಸ್ಥೆಯವರಿಂದ ಕೈಗೊಳ್ಳಲಾಗಿದೆ.
- ಮುಲ್ಕಿ ಮತ್ತು ಕಂಪ್ಲಿ ಪಟ್ಟಣಗಳಲ್ಲಿ ಟ್ರಯಲ್ ರನ್ ಪೂರ್ಣಗೊಂಡಿದೆ.
- ಮಹಾಲಿಂಗಪುರ ಪಟ್ಟಣದಲ್ಲಿ ಟ್ರಯಲ್ ರನ್ ಪ್ರಗತಿಯಲ್ಲಿರುತ್ತದೆ.
- ಮುಂಡರಗಿ, ಕೊಟ್ಟೂರು, ತೆಕ್ಕಲಕೋಟೆ, ತೇರೆದಾಳ, ಮುದಗಲ್ ಮತ್ತು ಕೆ.ಆರ್ ಪೇಟೆ ಪಟ್ಟಣಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಜಿಲ್ಲಾವಾರು ವಿವರ **ಅನುಬಂಧ-3** ರಲ್ಲಿ ಲಗತ್ತಿಸಿದೆ.

**<u>ಸ್ಮಾರ್ಟ್ ಸಿಟಿ ಅಭಿಯಾನ</u>**

ಕೇಂದ್ರ ಹಾಗೂ ರಾಜ್ಯ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನವು 2015 ರಿಂದ ಪ್ರಾರಂಭಗೊಂಡಿದ್ದು, ಅಭಿಯಾನದಡಿ ರಾಜ್ಯದಿಂದ ಈ ಕೆಳಗಿನ 7 ನಗರಗಳು ಆಯ್ಕೆಯಾಗಿರುತ್ತವೆ.

1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು

ಸ್ಮಾರ್ಟ್ ಸಿಟಿ ಯೋಜನೆಗೆ ಕೆ.ಯು.ಐ.ಡಿ.ಎಫ್.ಸಿ ಯು ರಾಜ್ಯಮಟ್ಟದ ನೋಡಲ್ ಸಂಸ್ಥೆಯಾಗಿದ್ದು, ಯೋಜನಾ ಅನುಷ್ಠಾನವು ಆಯಾ ನಗರಗಳಲ್ಲಿ ಸ್ಥಾಪಿಸಲಾಗಿರುವ ವಿಶೇಷ ಉದ್ದೇಶಿತ ವಾಹನಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಮುಂದುವರೆದು, ಸ್ಮಾರ್ಟ್ ಸಿಟಿ ಅನುದಾನ ಹಾಗೂ ಪಿಪಿಪಿ ಆಧಾರದಲ್ಲಿ ಎಲ್ಲಾ 7 ನಗರಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಹಂತ (ಭೌತಿಕ ಪ್ರಗತಿ) ಈ ಕೆಳಕಂಡಂತಿದೆ;

| ನಗರ | ಒಟ್ಟು ಕಾಮಗಾರಿಗಳು | | ಪೂರ್ಣಗೊಂಡ | | ಪ್ರಗತಿಯಲ್ಲಿರುವ | | ಟೆಂಡರ್ ಹಂತದ | | ವಿಸ್ತೃತ ಯೋಜನಾ ವರದಿ | |
|---|---|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಬೆಳಗಾವಿ | 110 | 1008 | 46 | 165 | 60 | 720 | 4 | 123 | 0 | 0 |
| ದಾವಣಗೆರೆ | 95 | 906 | 60 | 242 | 33 | 656 | 2 | 8 | 0 | 0 |
| ಹುಬ್ಬಳ್ಳಿ-ಧಾರವಾಡ | 64 | 1048 | 32 | 206 | 28 | 602 | 4 | 240 | 0 | 0 |
| ಮಂಗಳೂರು | 56 | 1352 | 18 | 61 | 30 | 871 | 7 | 276 | 1 | 144 |
| ತುಮಕೂರು | 158 | 1277 | 117 | 548 | 41 | 729 | 0 | 0 | 0 | 0 |
| ಬೆಂಗಳೂರು | 38 | 910 | 7 | 34 | 31 | 875 | 0 | 0 | 0 | 0 |
| **ಒಟ್ಟು** | **521** | **6501** | **280** | **1256** | **223** | **4453** | **17** | **647** | **1** | **144** |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಸದರಿ ಯೋಜನೆಯ ಅವಧಿಯು 05 ವರ್ಷಗಳಾಗಿದ್ದು, ಕೋವಿಡ್ ಲಾಕ್ ಡೌನ್ ನ ಪರಿಸ್ಥಿತಿಯಿಂದ, ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಯೋಜನೆಯ ಕಾಲಾವಧಿಯನ್ನು ಜೂನ್ 2023ರ ವರೆಗೆ ವಿಸ್ತರಿಸಿದ್ದು, ಈ ಕಾಲಮಿತಿಯೊಳಗೆ ಅಭಿಯಾನದಡಿ ಹಮ್ಮಿಕೊಳ್ಳಲಾಗಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಆ) | ಕಳೆದ ವರ್ಷಗಳಲ್ಲಿ ಕೆ.ಯು.ಐ.ಡಿ.ಎಫ್.ಸಿ ಈ ಯೋಜನೆಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನವೆಷ್ಟು? | **ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ)** |

ಕಳೆದ ವರ್ಷಗಳಲ್ಲಿ ಎನ್.ಕೆ.ಯು.ಎಸ್.ಐ.ಪಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಎನ್.ಕೆ.ಯು.ಎಸ್.ಐ.ಪಿ ಯೋಜನೆ 2009 ರಿಂದ ಎಡಿಬಿ ನೆರವಿನಿಂದ ಅನುಷ್ಠಾನಗೊಳಿಸುತ್ತಿದ್ದು, ಎಡಿಬಿ ನೆರವು 2016 ರಲ್ಲಿ ಮುಕ್ತಾಯವಾದ ನಂತರ ಸರ್ಕಾರದ ಅನುಮೋದನೆ ಮೇರೆಗೆ ವಾಣಿಜ್ಯ ಬ್ಯಾಂಕಿನ ಸಾಲದ ನೆರವು ಮತ್ತು ಇತರೆ ಮೂಲಗಳ ಹಣಕಾಸಿನಡಿಯಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳಿಗೆ ಆಗಿಂದಾಗ್ಯೆ ವೆಚ್ಚವಾದಂತೆ ಹಣವನ್ನು ಭರಿಸಲಾಗುತ್ತಿದೆ.

ಇಲ್ಲಿಯವರೆಗೆ ರೂ.2462.14 ಕೋಟಿ ವೆಚ್ಚವಾಗಿರುತ್ತದೆ.

**ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್)**

ಕ್ವಿಮಿಪ್ ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕಳೆದ ಎರಡು ವರ್ಷಗಳಲ್ಲಿ ಪಡೆದ ಅನುದಾನದ ವಿವರ;

| ಕ್ರ. ಸಂ | ವರ್ಷ | ಕೇಂದ್ರ ಸರ್ಕಾರದಿಂದ ಪಡೆದ ಅನುದಾನ | ರಾಜ್ಯ ಸರ್ಕಾರದಿಂದ ಪಡೆದ ಅನುದಾನ |
|---|---|---|---|
| 1 | 2019-20 | ರೂ.102.75 ಕೋ. | ರೂ.306.41 ಕೋ. |
| 2 | 2020-21 | ರೂ.108.65 ಕೋ. | ರೂ.337.61 ಕೋ. |

**ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ)**

ರಾಜ್ಯ ಸರ್ಕಾರದಿಂದ ಕಳೆದ 2 ವರ್ಷಗಳಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಮುಂದುವರೆದ ಕರ್ನಾಟಕ ಪೌರ ಸುಧಾರಣ (ಕೆಎಮ್‌ಆರ್‌ಪಿ)ಯಡಿ ಪಡೆದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಜಿಲ್ಲೆ | ಯೋಜನಾ ನಗರಗಳು | ಕಳೆದ 2 ವರ್ಷಗಳಲ್ಲಿ ಪಡೆದ ಅನುದಾನದ ವಿವರ (ರೂ.ಕೋಟಿಗಳಲ್ಲಿ) | |
|---|---|---|---|---|
| | | | 2019-20 | 2020-21 |
| 1 | ತುಮಕೂರು | ತಿಪಟೂರು | 18.75 | 42.75 |
| 2 | ಚಾಮರಾಜನಗರ | ಕೊಳ್ಳೇಗಾಲ | | |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | |

**ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ - (ಕೆಯುಡಬ್ಲ್ಯೂಎಸ್ಎಂಪಿ)**

ದಿನಾಂಕ: 24.05.2016ರ ವಿಶ್ವಬ್ಯಾಂಕ್ ರವರೊಂದಿಗಿನ ಸಾಲದ ಕರಾರಿನಂತೆ ($100 ಮಿಲಿಯನ್ ಗಳ ನೆರವು) ಸದರಿ ಯೋಜನೆಗೆ ಒಟ್ಟು ವಿಶ್ವಬ್ಯಾಂಕ್ ನೆರವು (ಸಾಲ) ರೂ.678.30 ಕೋಟಿಗಳಾಗಿರುತ್ತದೆ. ಕಾಮಗಾರಿವಾರು ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಯೋಜನಾ ನಗರ | ಯೋಜನಾ ವೆಚ್ಚ | ಪಾಲು | | |
|---|---|---|---|---|---|
| | | | ವಿಶ್ವ ಬ್ಯಾಂಕ್ | ಕರ್ನಾಟಕ ಸರ್ಕಾರ | ನಸ್ತ್ಸಂ |
| 1 | ಕಲಬುರಗಿ | 298.8 | 195.30 | 26.40 | 77.10 |
| 2 | ಬೆಳಗಾವಿ | 280.8 | 183.60 | 24.80 | 72.50 |
| 3 | ಹುಬ್ಬಳ್ಳಿ-ಧಾರವಾಡ | 458.2 | 299.40 | 40.40 | 118.30 |
| | ಒಟ್ಟು | 1037.80 | 678.30 | 91.60 | 267.90 |

2019-20ನೇ ಸಾಲಿನಿಂದ 2021-22 ಸಾಲಿನವರೆಗೆ ಒಟ್ಟು ರೂ.446.78 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಫೆಬ್ರುವರಿ-2022 ರ ಅಂತ್ಯದವರೆಗೆ ರೂ.370.92 ಕೋಟಿಗಳು ವೆಚ್ಚವಾಗಿರುತ್ತದೆ. ವಿಶ್ವಬ್ಯಾಂಕಿನಿಂದ ರೂ.251.36 ಕೋಟಿಗಳನ್ನು ಮರುಪಾವತಿ ಮಾಡಿಕೊಳ್ಳಲಾಗಿರುತ್ತದೆ. ವರ್ಷವಾರು ವಿವರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಿದೆ.

**9 ಪಟ್ಟಣಗಳ ನೀರು ಸರಬರಾಜು ಯೋಜನೆ**

9 ಪಟ್ಟಣಗಳ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆಯ ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕಳೆದ ಎರಡು ವರ್ಷಗಳಲ್ಲಿ ಪಡೆದ ಅನುದಾನದ ವಿವರ;

| ಕ್ರ. ಸಂ. | ವರ್ಷ | ಕೇಂದ್ರ ಸರ್ಕಾರದಿಂದ ಪಡೆದ ಅನುದಾನ | ರಾಜ್ಯ ಸರ್ಕಾರದಿಂದ ಪಡೆದ ಅನುದಾನ |
|---|---|---|---|
| 1 | 2019–20 | – | ರೂ. 60.22 ಕೋ. |
| 2 | 2020–21 | – | ರೂ. 7.00 ಕೋ. |

**ಸ್ಮಾರ್ಟ್ ಸಿಟಿ ಅಭಿಯಾನ**

ಸ್ಮಾರ್ಟ್ ಸಿಟಿ ಅಭಿಯಾನದಡಿ ಆಯ್ಕೆಯಾದ ಪ್ರತಿ ನಗರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರವು ತಲಾ ರೂ. 500 ಕೋಟಿಯಂತೆ, ಒಟ್ಟು ರೂ. 1000 ಕೋಟಿ ಅನುದಾನ ಮೀಸಲಿರಿಸಿದೆ.

ಸ್ಮಾರ್ಟ್ ಸಿಟಿ ಅಭಿಯಾನದಡಿ 2015 ರಿಂದ ಈವರೆಗೆ ನಗರಗಳಿಗೆ ಬಿಡುಗಡೆಯಾದ ಮತ್ತು ಆರ್ಥಿಕ ಪ್ರಗತಿಯ ವಿವರ ಈ ಕೆಳಕಂಡಂತಿದೆ.

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td></td><td></td><td>
<table>
<tr><th>ನಗರ</th><th>ಈವರೆಗೆ ಬಿಡುಗಡೆಯಾದ ಅನುದಾನ (ರೂ. ಕೋಟಿ)</th><th>ಆರ್ಥಿಕ ಪ್ರಗತಿ (ರೂ. ಕೋಟಿಗಳಲ್ಲಿ)</th></tr>
<tr><td>ಬೆಳಗಾವಿ</td><td>790.05</td><td>627.51</td></tr>
<tr><td>ದಾವಣಗೆರೆ</td><td>792.00</td><td>531.58</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>593.06</td><td>468.74</td></tr>
<tr><td>ಮಂಗಳೂರು</td><td>590.25</td><td>397.00</td></tr>
<tr><td>ಶಿವಮೊಗ್ಗ</td><td>592.79</td><td>498.80</td></tr>
<tr><td>ತುಮಕೂರು</td><td>788.28</td><td>601.44</td></tr>
<tr><td>ಬೆಂಗಳೂರು</td><td>542.00</td><td>470.78</td></tr>
<tr><td>ಒಟ್ಟು</td><td>4688.43</td><td>3595.85</td></tr>
</table>
</td></tr>
<tr><td>ಇ)</td><td>ಮುಂದಿನ ಆರ್ಥಿಕ ವರ್ಷದಲ್ಲಿ ಈ ನಿಗಮವು ಹಮ್ಮಿಕೊಂಡಿರುವ ಯೋಜನೆಗಳಾವುವು? (ಜಿಲ್ಲಾವಾರು ವಿವರ ನೀಡುವುದು)</td><td>ಸಂಸ್ಥೆಯು ಮುಂದಿನ ಆರ್ಥಿಕ ವರ್ಷದಲ್ಲಿ ಯಾವುದೇ ಹೊಸ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ಈಗಾಗಲೇ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.</td></tr>
<tr><td>ಈ)</td><td>ರಾಜ್ಯದ ಎಲ್ಲಾ ನಗರಗಳಿಗೆ ಆದ್ಯತೆ ನೀಡಿ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಹಾಗೂ ಕನಿಷ್ಠ ಮೂಲಸೌಕರ್ಯ ಇಲ್ಲದ ನಗರಗಳಿಗೆ ಪ್ರಥಮ ಆದ್ಯತೆ ನೀಡಿ ಯೋಜನಾನುಷ್ಠಾನಗಳ ಸೌಲಭ್ಯ ದೊರಕಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿ.ಬಿ.ಎಂ.ಪಿ. ಹೊರತುಪಡಿಸಿ) ಈ ಕೆಳಕಂಡ ಯೋಜನೆಗಳಡಿ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ.<br><br>1. <u>ಎಸ್.ಎಫ್.ಸಿ ಮುಕ್ತನಿಧಿ ಅನುದಾನ:</u> ಮೂಲಭೂತ ಸೌಕರ್ಯ ಕಲ್ಪಿಸಲು 1) ಕುಡಿಯುವ ನೀರು 2) ತರಕಾರಿ ಮಾರುಕಟ್ಟೆ 3) ಮಾಂಸ. ಕೋಳಿ ಹಾಗೂ ಮೀನು ಮಾರುಕಟ್ಟೆ 4) ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ 5) ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು 6) ಸ್ಮಶಾನ ಅಭಿವೃದ್ಧಿ 7) ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br><u>ಎಸ್.ಎಫ್.ಸಿ ಕುಡಿಯುವ ನೀರು</u> : 1) ಕೊಳವೆ ಬಾವಿಗಳನ್ನು ಆಳಗೊಳಿಸುವುದು /ಸ್ವಚ್ಛಗೊಳಿಸುವುದು 2) ಹೈಡ್ರೋಫ್ಯಾಕ್ಚರಿಂಗ್ 3) ನೀರು ಸರಬರಾಜು ಪೈಪುಗಳ ದುರಸ್ಥಿ/ ಬದಲಾವಣೆ 4) ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ 5) ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.</td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | • ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತಿದೆ.<br><br>2. **ರಾಜ್ಯದ ಪಟ್ಟಣ ಭಾಗದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ**<br><br>• ವೈಯಕ್ತಿಕ ಶೌಚಾಲಯಗಳ ನಿರ್ಮಾಣ<br>• ಸಮುದಾಯ ಹಾಗೂ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ<br>• ಅಧಿಕಾರಿಗಳ ಸಾಮರ್ಥ್ಯ ಬಲವರ್ಧನೆಗೆ ತರಬೇತಿಗಳು<br>• ಘನತ್ಯಾಜ್ಯ ನಿರ್ವಹಣೆ<br>• ಸಾರ್ವಜನಿಕರಲ್ಲಿ ತಿಳುವಳಿಕೆ ಹಾಗೂ ಅರಿವು ಮೂಡಿಸುವುದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>3. **ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ** 2015-16 ರಿಂದ 2022 ರವರೆಗೆ ರಾಜ್ಯದ ಆಯ್ಕೆಯಾದ 27 ನಗರ/ಪಟ್ಟಣಗಳಿಗೆ ಅನುಮೋದನೆಯಾದ ಅನುದಾನದ ಅನುಪಾತ ಕೇಂದ್ರ 50%, ರಾಜ್ಯ 20%, ನಗರ ಸ್ಥಳೀಯ ಸಂಸ್ಥೆಗಳು 30% ರಂತೆ ಒಟ್ಟು ಅನುದಾನ ರೂ.4952.87 ಕೋಟಿಗಳು ಹಂಚಿಕೆಯಾಗಿರುತ್ತದೆ.<br><br>4. ರಾಜ್ಯದ 10 ಮಹಾನಗರ ಪಾಲಿಕೆಗಳಿಗೆ **ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯನ್ನು** 2019-20ನೇ ಸಾಲಿನಿಂದ 2023-24ನೇ ಸಾಲಿನವರೆಗೆ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.1325.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ.<br><br>5. ರಾಜ್ಯದ ಒಟ್ಟು 263 ನಗರ ಸ್ಥಳೀಯ ಸಂಸ್ಥೆಗಳಿಗೆ **ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯನ್ನು** 2017-18ನೇ ಸಾಲಿನಿಂದ 2019-20ನೇ ಸಾಲಿನ ಅವಧಿಯಲ್ಲಿ ಅನುಷ್ಠಾನಗೊಳಿಸಲು ರೂ.2890.00ಕೋಟಿಗಳ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ.<br><br>6. ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು. ಸರ್ಕಾರದ ಆದೇಶ ಸಂಖ್ಯೆ: ನಅಇ 124 ಸಮಸ 2021, ದಿನಾಂಕ: 14-01-2022 ರಲ್ಲಿ ರೂ.3885.00 ಕೋಟಿಗಳ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ. |

**ಕಡತ ಸಂಖ್ಯೆ: ನಅಇ 63 ಪಿ.ಆರ್.ಜೆ 2022**

**(ಬಿ.ಎ.ಬಸವರಾಜ)**
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

## ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ "ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" ದಡಿ ಕಳೆದ 2 ವರ್ಷಗಳ ಕಾಮಗಾರಿಗಳ ವಿವರ.

| ಕ್ರ ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಕಾಮಗಾರಿ ಹೆಸರು | ಪರಿಷ್ಕೃತ ಗುತ್ತಿಗೆ ಮೊತ್ತ (ರೂ.ಕೋಟಿ) | ಗುತ್ತಿಗೆದಾರರ ಹೆಸರು | ಖರ್ಚು ಮೊತ್ತ (ರೂ.ಕೋಟಿ) | ಷರ |
|---|---|---|---|---|---|---|---|
| 1 | ಗದಗ | ಗದಗ–ಬೆಟಗೇರಿ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–4ಜಿಡಿಜಿ01) | 85.76 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 71.76 | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಹಾವೇರಿ | ಹಾವೇರಿ | ಒಳಚರಂಡಿ ವ್ಯವಸ್ಥೆ ಹಾಗೂ ಎಫ್‌ಎಎಲ್ ಮಾದರಿಯ ಎಸ್‌ಟಿಪಿ ನಿರ್ಮಾಣ ಮತ್ತು ಉಳಿಕೆ ಕಾಮಗಾರಿಗಳು (ಪ್ಯಾಕೇಜು–04ಹೆಚ್‌ವಿಆರ್02). | 18.06 | ಮೆ//ಗುರು ರಾಘವೇಂದ್ರ | 15.21 | ಕಾಮಗಾರಿ ಪೂರ್ಣಗೊಂಡಿದೆ ದೋಷ ಹೊಣೆಗಾರಿಕೆ ಅವಧಿಯಲ್ಲಿದ್ದು ಎಸ್.ಟಿ.ಪಿ ಘಟಕದಲ್ಲಿ ಬಂದಿರುವ ದೋಷಗಳ ಸರಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| 3 | | ಹಾವೇರಿ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಹೆಚ್‌ವಿಆರ್01) | 38.07 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 31.29 | ಕಾಮಗಾರಿ ಪ್ರಗತಿಯಲ್ಲಿದೆ. |
| 4 | ಬೆಳಗಾವಿ | ನಿಪ್ಪಾಣಿ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಎನ್‌ಪಿಎನ್01) | 24.81 | ಮೆ//ಜೈನ್ ಇರಿಗೇಷನ್ಸ್ ಪ್ರೈ.ಲಿ | 22.88 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆ ಹಂತದಲ್ಲಿದೆ. |
| 5 | ಬಾಗಲಕೋಟೆ | ರಬಕವಿ–ಬನಹಟ್ಟಿ | ಒಳಚರಂಡಿ ಜಾಲ ಮತ್ತು ಎಫ್.ಎ.ಎಲ್ ಮಾದರಿಯ 9.2 ಎಂ.ಎಲ್.ಡಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು–02ಆರ್‌ಬಿಕೆ02). | 44.00 | ಮೆ//ಅಕ್ವಾಟೆಕ್ ಲಕ್ಷ್ಮೀ (ಜೆವಿ) | 41.99 | ಕಾಮಗಾರಿ ಪೂರ್ಣಗೊಂಡಿದೆ. ಒಳಚರಂಡಿ ಮನೆ ಸಂಪರ್ಕವನ್ನು ನಗರಸಭೆಯವರು ಕೈಗೊಂಡಿರುತ್ತಾರೆ. |
| 6 | | ಇಳಕಲ್ | ಎಫ್.ಎ.ಎಲ್ ಮಾದರಿ 8 ಎಂ.ಎಲ್.ಡಿ ಎಸ್.ಟಿ.ಪಿ ನಿರ್ಮಾಣ ಹಾಗೂ ಒಳಚರಂಡಿ ಜಾಲದ ಉಳಿಕೆ ಕಾಮಗಾರಿಗಳು (ಪ್ಯಾಕೇಜು–02ಐಎಲ್‌ಕೆ02). | 39.5 | ಮೆ//ಯುಪಿಎಲ್ ಎನ್ವಿರಾನ್‌ಮೆಂಟಲ್ ಇಂಜನೀಯರ್ಸ್ ಲಿಮಿಟೆಡ್. | 38.46 | ಕಾಮಗಾರಿ ಪೂರ್ಣಗೊಂಡಿದೆ |
| 7 | ಯಾದಗೀರ್ | ಯಾದಗೀರ್ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ವೈಜಿಆರ್01). | 15.5 | ಮೆ//ವಿಶ್ವರಾಜ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿ. | 14.57 | ಕಾಮಗಾರಿ ಪ್ರಗತಿಯಲ್ಲಿದೆ |
| 8 | ಬೀದರ್ | ಬೀದರ್ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಡಿಆರ್01). | 35.8 | ಮೆ//ವಿಶ್ವರಾಜ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿ. | 32.82 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆ ಹಂತದಲ್ಲಿದೆ. |

| ಕ್ರ ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಕಾಮಗಾರಿ ಹೆಸರು | ಪರಿಷ್ಕೃತ ಗುತ್ತಿಗೆ ಮೊತ್ತ (ರೂ.ಕೋಟಿ) | ಗುತ್ತಿಗೆದಾರರ ಹೆಸರು | ಖರ್ಚು ಮೊತ್ತ (ರೂ.ಕೋಟಿ) | ಷರ |
|---|---|---|---|---|---|---|---|
| 9 | | ಬಸವಕಲ್ಯಾಣ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಎಸ್‌ಕೆ01) | 54.00 | ಮೆ//ವಿಶ್ವರಾಜ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿ. | 52.83 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆ ಹಂತದಲ್ಲಿದೆ. |
| 10 | ಬಳ್ಳಾರಿ | ಬಳ್ಳಾರಿ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಎಲ್‌ವೈ01). | 74.18 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 52.98 | ಕಾಮಗಾರಿ ಪ್ರಗತಿಯಲ್ಲಿದೆ |
| 11 | ವಿಜಯನಗರ | ಹೊಸಪೇಟೆ | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಹೆಚ್‌ಪಿಟಿ01) | 58.11 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 45.17 | ಕಾಮಗಾರಿ ಪ್ರಗತಿಯಲ್ಲಿದೆ |
| 12 | | ಹೊಸಪೇಟೆ | ಒಳಚರಂಡಿ ವ್ಯವಸ್ಥೆ (ಪ್ಯಾಕೇಜು–01ಹೆಚ್‌ಪಿಟಿ02ಸಿ). | 13.97 | ಮೆ//ಕೃಷ್ಣ ಕನ್‌ಸ್ಟ್ರಕ್ಷನ್ಸ್ | 11.13 | ಕಾಮಗಾರಿ ಪ್ರಗತಿಯಲ್ಲಿದೆ. |
| 13 | ರಾಯಚೂರು | ರಾಯಚೂರು | 24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಆರ್‌ಸಿಆರ್01) | 97.34 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 70.36 | ಕಾಮಗಾರಿ ಪ್ರಗತಿಯಲ್ಲಿದೆ |
| 14 | | ಸಿಂಧನೂರು | 24/7 ನಿರಂತರ ನೀರು ಸರಬರಾಜು ಕಾಮಗಾರಿ (04ಎಸ್‌ಎನ್‌ಡಿ01) | 99.00 | ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. | 83.76 | ಕಾಮಗಾರಿ ಪ್ರಗತಿಯಲ್ಲಿದೆ |
| 15 | | ಸಿಂಧನೂರು | ಒಳಚರಂಡಿ ವ್ಯವಸ್ಥೆ ಹಾಗೂ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು–03ಎಸ್‌ಎನ್‌ಡಿ02) . | 61.25 | ಮೆ//ಯುಪಿಎಲ್ ಇಂಜಿನೀಯರ್ಸ್ ಲಿಮಿಟೆಡ್ | 57.65 | ಕಾಮಗಾರಿ ಪ್ರಗತಿಯಲ್ಲಿದೆ. |

ಕಾರ್ಯ ವ್ಯವಸ್ಥಾಪಕರು
(ಎಸ್.ಕೆ.ಯು.ಎಸ್.ಐ.ಪಿ)

ಅನುಬಂಧ-2

ಟ್ರಾಂಚ್-1

KIUWMIP

| ಕ್ರ ಸಂ | ಜಿಲ್ಲೆ | ನಗರ/ಪಟ್ಟಣ | ಕಾಮಗಾರಿಯ ಹೆಸರು | ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ) | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ |
|---|---|---|---|---|---|---|---|---|
| 1 | ದಾವಣಗೆರೆ | ದಾವಣಗೆರೆ | ಒಳಚರಂಡಿ ಕಾಮಗಾರಿ | 108.43 | 13.01.2015 | 31.03.2022 | 99.07% | 97.22% (105.42 ಕೋ) |
| 2 | | | (20 MLD and 5 MLD) ತಾಜ್ಯ ನೀರು ಸಂಸ್ಕರಣಾ ಘಟಕ | 39.90 | 21.08.2015 | 30.11.2018 | ಕಾರ್ಯಾಚರಣೆ ಮತ್ತು ನಿರ್ವಹಣೆ ಪೂರ್ಣಗೊಂಡಿರುತ್ತದೆ. | 97.22% (105.42 ಕೋ) |
| 3 | | | ಸಗಟು ನೀರು ಕಾಮಗಾರಿ | 85.47 | 01.08.2017 | 30.06.2022 | 95.35% | 89.96% (76.89 ಕೋ) |
| 4 | | | 24/7 ನೀರು ಸರಬರಾಜು ಕಾಮಗಾರಿ | 472.19 | 18.05.2018 | 31.01.2023 | 72.76% | 64.00% (302.21 ಕೋ) |
| 5 | | ಹರಿಹರ | ಒಳಚರಂಡಿ ಕಾಮಗಾರಿ ಮತ್ತು (18 MLD) ತಾಜ್ಯ ನೀರು ಸಂಸ್ಕರಣಾ ಘಟಕ | 66.73 | 09.01.2015 | 31.08.2020 | ಕಾಮಗಾರಿ ಪೂರ್ಣಗೊಂಡಿರುತ್ತದೆ. | 97.02% (64.74 ಕೋ) |
| 6 | | | ಸಗಟು ನೀರು ಕಾಮಗಾರಿ | 27.03 | 18.05.2017 | 31.08.2020 | ಕಾಮಗಾರಿ ಪೂರ್ಣಗೊಂಡಿರುತ್ತದೆ. | 100% (27.03 ಕೋ) |
| 7 | | | 24/7 ನೀರು ಸರಬರಾಜು ಕಾಮಗಾರಿ | 50.12 | 01.09.2017 | 28.02.2021 | ಕಾಮಗಾರಿ ಪೂರ್ಣಗೊಂಡಿದ್ದು Trial run ಹಂತದಲ್ಲಿರುತ್ತದೆ. | 96.28% (48.26 ಕೋ) |
| 8 | ಹಾವೇರಿ | ಬ್ಯಾಡಗಿ | ಒಳಚರಂಡಿ ಕಾಮಗಾರಿ ಮತ್ತು (5 MLD) ತಾಜ್ಯ ನೀರು ಸಂಸ್ಕರಣಾ ಘಟಕ | 63.42 | 16.04.2016 | 31.03.2022 | 96.50% | 96.29% (61.07 ಕೋ) |
| 9 | | | ಸಗಟು ನೀರು ಕಾಮಗಾರಿ | 6.32 | 18.05.2017 | 17.11.2018 | ಕಾಮಗಾರಿ ಪೂರ್ಣಗೊಂಡಿರುತ್ತದೆ. | 100% (6.32 ಕೋ) |
| 10 | | | 24/7 ನೀರು ಸರಬರಾಜು ಕಾಮಗಾರಿ | 25.67 | 16.08.2017 | 30.06.2022 | 83.91% | 79.04% (20.29 ಕೋ) |
| 11 | | ರಾಣೆಬೆನ್ನೂರು | ಸಗಟು ನೀರು ಮತ್ತು 24/7 ನೀರು ಸರಬರಾಜು ಕಾಮಗಾರಿ | 127.11 | 06.10.2017 | 10.10.2021 | ಕಾಮಗಾರಿ ಪೂರ್ಣಗೊಂಡಿದ್ದು Trial run ಹಂತದಲ್ಲಿರುತ್ತದೆ. | 100% (127.11 ಕೋ) |
| 12 | | | ಗಂಗಾಜಲ ದೊಡ್ಡಕೆರೆಯ ಪುನರುಜ್ಜೀವನ ಕಾಮಗಾರಿ | 29.83 | 05.09.2018 | 31.03.2022 | 98.45% | 81.43% (24.29 ಕೋ) |

ಟ್ರಾಂಚ್-2

| ಕ್ರ ಸಂ | ಜಿಲ್ಲೆ | ನಗರ/ಪಟ್ಟಣ | ಕಾಮಗಾರಿಯ ಹೆಸರು | ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ) | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ |
|---|---|---|---|---|---|---|---|---|
| 1 | ಉಡುಪಿ | ಕುಂದಾಪುರ | 24x7 ಕುಡಿಯುವ ನೀರು ಸರಬರಾಜು ಕಾಮಗಾರಿ | 28.10 | 19.12.2017 | 30.09.2021 | ಕಾಮಗಾರಿ ಪೂರ್ಣಗೊಂಡಿದ್ದು Trial run ಹಂತದಲ್ಲಿರುತ್ತದೆ. | 84.12% (23.64 ಕೋ) |
| 2 | | ಉಡುಪಿ | 24x7 ಕುಡಿಯುವ ನೀರು ಸರಬರಾಜು ಕಾಮಗಾರಿ | 107.08 | 16.11.2018 | 10.10.2022 | 47.66% | 49.70% (53.22 ಕೋ) |
| 3 | | | 45 MLD ನೀರು ಶುದ್ಧೀಕರಣ ಘಟಕ ನಿರ್ಮಾಣ | 50.80 | 31.05.2021 | 30.05.2023 | 1.67% | 13.07% (6.64 ಕೋ) |
| 4 | | | ಸಗಟು ನೀರು ಸರಬರಾಜು ಸುಧಾರಣಾ ಕಾಮಗಾರಿ (ವರಾಹಿ) | 117.89 | 23.08.2019 | 22.05.2022 | 61.39% | 65.54% (77.27 ಕೋ) |
| 5 | ದಕ್ಷಿಣ ಕನ್ನಡ | ಪುತ್ತೂರು | 24x7 ಕುಡಿಯುವ ನೀರು ಸರಬರಾಜು ಕಾಮಗಾರಿ | 76.12 | 16.11.2018 | 10.06.2022 | 55.96% | 59.73% (45.47 ಕೋ) |
| 6 | | ಮಂಗಳೂರು | 24x7 ಕುಡಿಯುವ ನೀರು ಸರಬರಾಜು ಕಾಮಗಾರಿ | 585.30 | 24.12.2019 | 24.08.2023 | 23.42% | 28.20% (165.10 ಕೋ) |
| 7 | | | ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | 84.56 | 06.06.2018 | 27.07.2021 | ಕಾಮಗಾರಿ ಪೂರ್ಣಗೊಂಡಿರುತ್ತದೆ. | 100% (84.56 ಕೋ) |
| 8 | | | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | 41.84 | 28.01.2020 | 27.04.2022 | 10.37% | 2.24% (0.94 ಕೋ) |
| 9 | | | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 38.42 | 28.01.2020 | 27.04.2022 | 16.59% | 14.32% (5.50 ಕೋ) |
| 10 | | | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 77.97 | 06.06.2018 | 31.05.2022 | 93.22% | 85.71% (66.83 ಕೋ) |
| 11 | | | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4&7) ಮಂಗಳೂರು-2 | 52.96 | 06.03.2019 | 05.06.2022 | 30.35% | 29.00% (15.36 ಕೋ) |
| 12 | | | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) ಮಂಗಳೂರು-3 | 30.06 | 06.03.2019 | 05.06.2022 | 13.64% | 22.80% (7.54 ಕೋ) |
| 13 | | | ಸಗಟು ನೀರು ಸರಬರಾಜು ಕಾಮಗಾರಿ | 35.29 | 05.03.2019 | 31.05.2022 | 61.46% | 63.30% (22.34 ಕೋ) |

## ಅನುಬಂಧ-3

### ಕರ್ನಾಟಕದ 9 ಪಟ್ಟಣಗಳಲ್ಲಿ ನೀರು ಸರಬರಾಜು ಯೋಜನೆಯ ಮಾಹಿತಿ.

| ಕ್ರ. ಸಂ. | ಜಿಲ್ಲೆ [illegible] | ನಗರ ಸ್ಥಳೀಯ ಸಂಸ್ಥೆ [illegible] | ಕಾಮಗಾರಿಯ ಟೆಂಡರ್ ಮೊತ್ತ (ರೂ. ಕೋಟಿಗಳಲ್ಲಿ) | ಟೆಂಡರ್ ಗುತ್ತಿಗೆ ನೀಡಿದ ದಿನಾಂಕ | ಕಾಮಗಾರಿ ಮುಕ್ತಾಯಗೊಳಿಸಲು ಉದ್ದೇಶಿಸಿರುವ ದಿನಾಂಕ | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ | [illegible] |
|---|---|---|---|---|---|---|---|---|
| 1 | ಗದಗ | ಮುಂಡರಗಿ | 17.43 | 02.03.2018 | 30.11.2021 (EoT-ಪ್ರಸ್ತಾವನೆ ಪರಿಶೀಲನೆಯಲ್ಲಿದೆ) | 21% | 18 % (3.00 ಕೋ.) | ಪ್ರಗತಿಯಲ್ಲಿರುತ್ತದೆ |
| 2. | ಬಳ್ಳಾರಿ | ಕೆಕ್ಕಲಕೋಟೆ | 21.73 | 08.03.2018 | 30.06.2022 | 50% | 38 % (8.16ಕೋ.) | ಪ್ರಗತಿಯಲ್ಲಿರುತ್ತದೆ |
| 3. | ಬಳ್ಳಾರಿ | ಕೊಟ್ಟೂರು | 13.55 | 09.03.2018 | 31.05.2022 | 42% | 38 % (5.10ಕೋ.) | ಪ್ರಗತಿಯಲ್ಲಿರುತ್ತದೆ |
| 4. | ಬಾಗಲಕೋಟೆ | ಮಹಾಲಿಂಗಪುರ | 10.84 | 05.03.2018 | 31.03.2022 | 90% | 46 % (5.09ಕೋ.) | ಪ್ರಗತಿಯಲ್ಲಿರುತ್ತದೆ |
| 5. | ಬಾಗಲಕೋಟೆ | ತೆರದಾಳ | 16.18 | 05.03.2018 | 31.08.2022 | 34% | 40 % (6.13ಕೋ.) | ಪ್ರಗತಿಯಲ್ಲಿರುತ್ತದೆ |
| 6 | ರಾಯಚೂರು | ಮುದಗಲ್ | 31.29 | 07.03.2018 | 30.09.2021 (EoT-ಪ್ರಸ್ತಾವನೆ ಪರಿಶೀಲನೆಯಲ್ಲಿದೆ) | 27% | 20 % (6.23ಕೋ.) | ಪ್ರಗತಿಯಲ್ಲಿರುತ್ತದೆ |
| 7 | ದಕ್ಷಿಣ ಕನ್ನಡ | ಮುಲ್ಕಿ | 15.87 | 17.01.2018 | ಕಾಮಗಾರಿ ಪೂರ್ಣಗೊಂಡಿದೆ | ಕಾಮಗಾರಿ ಪೂರ್ಣಗೊಂಡಿರುತ್ತದೆ | 95% (15.21 ಕೋ.) | ಟ್ರಯಲ್ ರನ್ ಪೂರ್ಣಗೊಂಡಿದೆ. ಪಣಂಬೂರ್ ಡಬ್ಲ್ಯೂ.ಟಿ.ಪಿ. ಯಿಂದ 3 ಎಂ.ಎಲ್.ಡಿ. ನೀರನ್ನು ಎಂ.ಸಿ.ಸಿ. ಒದಗಿಸಿದರೆ ಕಮಿಷನಿಂಗ್ ಮಾಡಬಹುದಾಗಿದೆ. |
| 8 | ಬಳ್ಳಾರಿ | ಕಂಪ್ಲಿ | 23.19 | 13.03.2018 | ಕಾಮಗಾರಿ ಪೂರ್ಣಗೊಂಡಿದೆ | ಕಾಮಗಾರಿ ಪೂರ್ಣಗೊಂಡಿರುತ್ತದೆ | 95% (22.54ಕೋ.) | ಕಾಮಗಾರಿ ಪೂರ್ಣಗೊಂಡಿದೆ. |
| 9 | ಮಂಡ್ಯ | ಕೆ.ಆರ್.ಪೇಟೆ | 17.00 | 14.08.2019 | 31.03.2022 | 90% | 55% (9.33ಕೋ.) | ಪ್ರಗತಿಯಲ್ಲಿರುತ್ತದೆ |

# ಅನುಬಂಧ-4

## ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ)

2019-20ನೇ ಸಾಲಿನಿಂದ 2021-22ನೇ ಸಾಲಿನವರೆಗೆ ವರ್ಷವಾರು ಅನುದಾನ ಹಾಗೂ ವೆಚ್ಚದ ಮಾಹಿತಿ

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಆರ್ಥಿಕ ವರ್ಷ | ಬಿಡುಗಡೆಯಾಗಿರುವ ಮೊತ್ತ | ವೆಚ್ಚವಾಗಿರುವ ಮೊತ್ತ | ವಿಶ್ವಬ್ಯಾಂಕ್ ನಿಂದ ಮರುಪಾವತಿ ಮಾಡಿಕೊಂಡಿರುವ ಮೊತ್ತ |
|---|---|---|---|---|
| 1 | 2019-20 | 13.18 | 5.48 | 0.00 |
| 2 | 2020-21 | 233.60 | 115.06 | 81.17 |
| 3 | 2021-22 (ಫೆಬ್ರವರಿ-22 ರ ಅಂತ್ಯದವರೆಗೆ) | 200.00 | 250.38 | 170.19 |
| ಒಟ್ಟು ಮೊತ್ತ | | 446.78 | 370.92 | 251.36 |

ಕಾರ್ಯ ವ್ಯವಸ್ಥಾಪಕರು (ಕುಸೆಂಪ್)
ಕೆಯುಐಡಿಎಫ್‌ಸಿ, ಬೆಂಗಳೂರು